QUESTION FOR ANSWER ON THE DAY

(but not taken up).

Pooling certain percentage of Income for the Development of Market Yards.

Q.—1157. Sri A. R. PANCHAGAVI (Gokak II).—

Will the Government be pleased to state:—

whether there is any proposal to pool certain percentage of the income of all the market committees in the State with a view to utilise the same for the development of market yards and improvement of marketing?

A.—Sri S. NIJALINGAPPA (Chief Minister) —

The question is under consideration.

---

2 P.M.

PAPERS LAID ON THE TABLE

Sri C. M. POONACHA (Minister for Industries and Home Affairs).—Sir, I lay on the Table of the House Notification No. Home Department 90, Motor Vehicles Taxation, 1957, dated in 19th August 1957, issued under sub-section (1) of section 8 of the Mysore Motor Vehicles Taxation and Tolls Act, 1951.

FOOD AND FAMINE SITUATION IN THE STATE.

(Debate Continued)

ಶ್ರೀ ಬಿ. ಜಿ. ಖೋತ್ (ಸಾವಂಗಾ).—ಮಾನ್ಯ ಅಧ್ಯಕ್ಷರೇ, ಇಪ್ಪು ದಿವಸ ಆಹಾರದ ವಿಷಯ ಪುಷ್ಕಳವಾಗಿ ಚರ್ಚೆಯಾಗಿದೆ. ಅನೇಕ ಸದಸ್ಯರು ಪುಷ್ಕಳವಾಗಿ ಮಾತನಾಡಿದ್ದಾರೆ. ನಾನು ಈ ವಿಚಾರದಲ್ಲಿ ಹೆಚ್ಚು ಹೇಳಬೇಕಾಗಿಲ್ಲ. ಆದರೂ ಕೆಲವು ಮಾತುಗಳನ್ನು ಹೇಳಬೇಕೆನ್ನುತ್ತೇನೆ. ಪ್ರತಿಯೊಂದು ಜೀವಿಗೂ ಅನ್ನಬೇಕು. ಅನ್ನವೇ ಜೀವನ, "ಅನ್ನಂ ವೈ ಪ್ರಾಣಾಃ". ಈ ಅನ್ನದ ಪ್ರಶ್ನೆಯನ್ನು ಹಿಂದೂಸ್ಥಾನ ಸರ್ಕಾರವಾಗಲಿ ಪ್ರಾಂತ ಸರ್ಕಾರವಾಗಲಿ ಯಾವ ರೀತಿ ಬಿಡಿಸಬೇಕೆಂಬುದು ಒಂದು ಮುಖ್ಯ ಸಮಸ್ಯೆಯಾಗಿದೆ. ಯುದ್ಧಕ್ಕೆ ಮೊದಲು ಹಿಂದೂಸ್ಥಾನದಲ್ಲಿ ಅನ್ನಕ್ಕೆ ತ್ರಾಸವಿರಲಿಲ್ಲ, ಬಹಳ ಅನ್ನ ವಿತ್ತು. 1914ರಲ್ಲಿ ಪ್ರಾರಂಭವಾದ ಮೊದಲನೆಯ ಯುದ್ಧದಿಂದಲೂ ತ್ರಾಸವಾಗುತ್ತಿದೆ. ಮೊದಲನೆಯ ಮಹಾ ಯುದ್ಧದಲ್ಲಿ ಸ್ವಲ್ಪ ಕಷ್ಟವಾಯಿತು. ಎರಡನೆಯ ಮಹಾ ಯುದ್ಧದಲ್ಲಿ ತೀವ್ರ ತ್ರಾಸವಾಯಿತು. ಅದಕ್ಕಿಂತಲೂ ಈಗ ಹೆಚ್ಚು ತ್ರಾಸ ನಡೆದಿದೆ. ಹೀಗಾಗುವುದಕ್ಕೆ ಕಾರಣವೇನು? ಮುಂಚೆ ಹಿಂದೂಸ್ಥಾನವೆಲ್ಲ ಒಂದಾಗಿ ಕೂಡಿತ್ತು; ಆಗ ಈ ತ್ರಾಸವಿರಲಿಲ್ಲ. ಈಗ ಹಿಂದೂಸ್ಥಾನ ಒಡೆದು ಪಾಕಿಸ್ತಾನ, ಬರ್ಮಾ ಬೇರೆ ಬೇರೆಯಾಗಿ ಸ್ವತಂತ್ರವಾಯಿತು. ಈ ಕಾರಣದಿಂದ ಅನ್ನದ ವಿಷಯದಲ್ಲಿ ಈಗಿನ ಹಿಂದೂಸ್ಥಾನ ಸ್ವಾವಲಂಬಿಯಾಗುವುದಕ್ಕೆ ಹೆಚ್ಚು ಕಷ್ಟವಾಗಿದೆ. ಪಾಕಿಸ್ತಾನದಿಂದ ಗೋಧಿ, ಕಡಲೆ ವಗೈರೆ ಮತ್ತು ಬರ್ಮಾದಿಂದ ಅಕ್ಕಿ ಬರುವುದು ನಿಂತು ಹೋಯಿತು. ಈ ಕಾರಣ ಇದೊಂದು ಕಠಿಣ ಸಮಸ್ಯೆಯಾಗಿದೆ. ಈ ಸಮಸ್ಯೆಯನ್ನು ಯಾವ ರೀತಿ ಬಿಡಿಸಬೇಕೆಂಬುದನ್ನು ಯೋಚನೆ ಮಾಡಬೇಕಾಗಿದೆ. ಹಿಂದೂಸ್ಥಾನ ಹರಿದು ಹಂಚಿ ಹೋದದರಿಂದ ಇದನ್ನು ಹೇಗೆ ಬಿಡಿಸಬೇಕೆಂಬುದೊಂದು ಪ್ರಶ್ನೆ. ಅಲ್ಲದೆ, ನಮ್ಮ ದೇಶದಲ್ಲಿ ದಿನೇ ದಿನೇ ಜನ ಸಂಖ್ಯೆ ಹೆಚ್ಚಾಗುತ್ತಲಿದೆ. ಪೂರ್ವ ಪಾಕಿಸ್ತಾನ ಮತ್ತು ಪಶ್ಚಿಮ ಪಾಕಿಸ್ತಾನದಿಂದ ಇಲ್ಲಿಗೆ ಅಧಿಕ ಸಂಖ್ಯೆಯಲ್ಲಿ ನಿರಾಶ್ರಿತರು ಅಥವ ನಿರ್ವಾಸಿತರು ಬಗಲೂ ಪ್ರತಿನಿತ್ಯ ಬರುತ್ತಲಿದ್ದಾರೆ. ಅವರಿಗೆಲ್ಲ ಅನ್ನವನ್ನೊದಗಿಸಬೇಕಾಗುವ ಪ್ರಸಂಗ ಬಂತು. ಇದರಿಂದ ವಿಶೇಷ ಜವಾಬ್ದಾರಿ ಹಿಂದೂಸ್ಥಾನ ಸರ್ಕಾರದ ಮೇಲೆ ಬಿತ್ತು. ಹಿಂದೂಸ್ಥಾನವು ಹರಿದು ಹಂಚಿ ಹೋದ ಕಾರಣ ಮತ್ತು ನಿರ್ವಾಸಿತ ಹಾಗೂ ಜನಸಂಖ್ಯೆಯಲ್ಲಿ ವೃದ್ಧಿ, ಆವರ್ಷಣ—ದುಷ್ಕಾಳ, ಮಹಾಪೂರ ಇತಾದಿಗಳ ಮೂಲಕ ಈ ಅನ್ನ ಪ್ರಶ್ನೆ ಒಂದು ಹೆಚ್ಚು ತಾಪದಾಯಕ ವಿಷಯವಾಗಿದೆ. ಜನ ಸಂಖ್ಯೆ ಜಗತ್ತಿನಲ್ಲಿ ಸಾಮಾನ್ಯಕ್ಕೆ 34ರಂತೆ ಹೆಚ್ಚುತ್ತಲಿದೆ ಎಂದು ಅಮೆರಿಕಾದವರದಿಯಿಂದ ತಿಳಿದು ಬಂದಿದೆ. ಅದರಲ್ಲಿ ನಮ್ಮ ದೇಶದ ವೃದ್ಧಿ ಪ್ರತಿ ವರ್ಷಕ್ಕೆ 50 ಲಕ್ಷ ಆಗುತ್ತದೆ, ಅನ್ನ ಸಂಪಾದನೆಯು ಕಡಮೆಯಾಯಿತು. ಆದ ಕಾರಣ ಅನ್ನದ ಉತ್ಪತ್ತಿಯನ್ನು ಹೆಚ್ಚು ಮಾಡಬೇಕಾಗಿದೆ. ಇದಕ್ಕೆ ಅನೇಕ ಯೋಜನೆಗಳನ್ನು ಕೈಗೊಳ್ಳುವುದು ಅತ್ಯಗತ್ಯ. ನೀರಾವರಿ (irrigation) ಕಾರ್ಯಗಳನ್ನು ಕೈಗೊಳ್ಳಲೇ ಬೇಕು. ಸಂಸ್ಥಾನಗಳು (States) ಸ್ವಾವಲಂಬಿಗಳಾಗಿರುವುದು ಅತ್ಯಂತ ಅಗತ್ಯ. ಎಲ್ಲರೂ ಕೇಂದ್ರ ಸರ್ಕಾರವನ್ನೇ ಅವಲಂಬಿಸಿದರೆ ಕಷ್ಟವಾಗುತ್ತದೆ. ಅವರಿಗೆ ಈ ಪ್ರಶ್ನೆಯನ್ನು ಸಂಪೂರ್ಣವಾಗಿ ಬಿಡಿಸುವುದಕ್ಕೆ ನಮ್ಮಕ್ಕೆ ಶಕ್ಯವಿಲ್ಲ. ಆದರಲ್ಲಿಯೂ ಪಾಕಿಸ್ತಾನದಿಂದ ಬಂದ ನಿರ್ವಾಸಿತರ ಪ್ರಶ್ನೆಯು ಪೂರ್ಣವಾಗಿ ಬಗೆಹರಿಸುವ ತನಕ ಅವರಿಗೆ ಸಾಧ್ಯವಲ್ಲ, ಕಷ್ಟವಿದೆ. ಅವರು ಹೆಚ್ಚು ಕಷ್ಟದಲ್ಲಿದ್ದಾರೆ, ನಲುಗಿದ್ದಲ್ಲಿದ್ದಾರೆ. Sterling balance, ಇದಕ್ಕಾಗಿ ಅರ್ಧದಷ್ಟು ಕಡಮೆಯಾಗಿದೆ. ಅನ್ನವನ್ನೊದಗಿಸಲು ಧಾನ್ಯವನ್ನು ಕೊಳ್ಳುವುದಕ್ಕೆ ಹಣ ಹೆಚ್ಚು ಖರ್ಚಾದ ಕಾರಣ ಕಬ್ಬಿಣ, ಸಕ್ಕರೆ ಮುಂತಾದ ಪದಾರ್ಥಗಳ ಮೇಲೆ ಇದರ ಪೂರ್ತಿಗಾಗಿ ಕರ ಹೆಚ್ಚು ಕೂಡಿಸಬೇಕಾಯಿತು. ಈ ಅನೇಕ ಕಾರಣಗಳಿಂದ ನಮ್ಮೀಪ ಭವಿಷ್ಯದಲ್ಲಿ ಈ ಅನ್ನ ಪ್ರಶ್ನೆ ನಮ್ಮನ್ನು ಬಿಟ್ಟೀತು ಎಂದು ಹೇಳುವುದಕ್ಕೆ ಶಕ್ಯವಿಲ್ಲ. ಇದನ್ನು ನಾವು ಕೇಂದ್ರ ಸರ್ಕಾರದ ಮೇಲೆ ಹಾಕುವುದೂ ತಪ್ಪು. ನಮ್ಮ ಶಕ್ತಿ ಇದ್ದಷ್ಟು ಮಟ್ಟಿಗೂ ನಾವು ಸ್ವಾವಲಂಬಿಗಳಾಗುವುದಕ್ಕೆ ಪ್ರಯತ್ನ ಮಾಡಬೇಕು. ಇದೇ ಆದ್ಯ ಕರ್ತವ್ಯ. ನೀರಾವರಿ ಯೋಜನೆಗಳನ್ನು ಕೈಗೊಂಡು ಶಕ್ಯವಿದ್ದಷ್ಟೂ ಈ ಸಮಸ್ಯೆಯನ್ನು ಬಿಡಿಸ